ಹೇಳಿದಾಗ ಮಂತ್ರಿಮಂಡಲ ನಡೆಸಿಕೊಂಡು ಹೋಗುವವರು ಕೇಳಲೇ ಬೇಕಾಗುತ್ತದೆ. ಕೊನೆಯದಾಗಿ ನಾವು ಹೇಳತಕ್ಕ ಮಾತಿನಲ್ಲಿ ಪೂರ್ಣ ನಂಬಿಕೆ ಇಟ್ಟು ಅದನ್ನು ಆಚರಣೆಗೆ ತರತಕ್ಕಂಥ ಮನೋಭಾವದವರು ಆದರೆ ಈ ಸಮಸ್ಯೆಗಳಿಲ್ಲಾ ಬರುವುದಿಲ್ಲ. ಏನು ಮಾಡುವುದಕ್ಕೆ ಆಗುತ್ತದೆ?

ಶ್ರೀ ಕಾಗೋಡು ತಿಮ್ಮಪ್ಪ : ಆದರೂ ಒಂದು ಸೋಲಿನಲ್ಲಿ ಕೂಡ ನಾವು ಗೆಲುವನ್ನು ನಿರೀಕ್ಷಣೆ ಮಾಡಬಹುದು. ಅದಕ್ಕೆ ನಾನು ಗೃಹ ಸಚಿವರಲ್ಲಿ ಕೇಳುವುದು ಏನೆಂದರೆ ಯಾರು ಬೇರು ಬಿಟ್ಟು ನಿಂತಂತಹ ಕೆಲವು ಅಧಿಕಾರಿಗಳು ಇರುತ್ತಾರೆ, ಅವರನ್ನು ಸ್ವಲ್ಪ ನಗರದಿಂದ ಹೊರ ವಲಯಕ್ಕೆ ಹಾಕಿ ಹೊಸ ಮುಖಗಳನ್ನು ಇಲ್ಲಿಗೆ ತನ್ನಿ. ಆಗ ಇಲ್ಲಿ ಸ್ವಲ್ಪ ಕಂಟ್ರೋಲ್ ಮಾಡುವುದಕ್ಕೆ ಆಗುತ್ತದೆ. ಏಕೆಂದರೆ ಬೆಂಗಳೂರು ಬೆಳೆಯತಕ್ಕ ನಗರ. ಬೆಂಗಳೂರು ಈವತ್ತಿಗೂ ಜಗತ್ತಿನಲ್ಲಿ ಗೌರವರನ್ನು ಪಡೆದಿರುವ ನಗರ ಮತ್ತು ಆಕರ್ಷಕವಾಗಿರುವ ನಗರವೂ ಆಗಿದೆ. ಇಡೀ ಭಾರತದಲ್ಲಿ ಬೆಂಗಳೂರಿಗೆ ಒಳ್ಳೆಯ ಹೆಸರು ಇದೆ. ಅದನ್ನು ಅಳಿಸಲು ನಾವು ಹೋಗಬಾರದು. ಗೃಹಸಚಿವರು ಇಲ್ಲಿ ಸ್ವಲ್ಪ ಸಕ್ರೀಯವಾದ ಪಾತ್ರವನ್ನು ನಿರ್ವಹಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಆರ್. ರೋಷನ್ ಬೇಗ್ (ಗೃಹ ಸಚಿವರು) : ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಅದರ ಬಗ್ಗೆ ಗಮನಹರಿಸುತ್ತೇನೆ.

ಕೋಲಾರ ಜಿಲ್ಲೆಯ ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಕೆರೆಗಳ ಹೂಳೆತ್ತುವ ವಿಚಾರ ಬಹಳ ಮುಖ್ಯವಾದುದು. ಅದರಲ್ಲೂ ಕೋಲಾರ, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸಂಬಂಧಿಸಿದಂತಹ ವಿಚಾರ ಇದಾಗಿದೆ. ಆಲಮಟ್ಟಿಯ ಬಗ್ಗೆ ಈಗತಾನೇ ಇಲ್ಲಿ ಚರ್ಚೆಯಾಯಿತು. ಮಾತು ಎತ್ತಿದರೆ ಮಾನ್ಯ ನಾಗೇಗೌಡರು ಆಲಮಟ್ಟಿಗಾಗಿ ಸಾವಿರಾರು ಕೋಟಿ ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ನಮ್ಮ ಭಾಗದಲ್ಲಿನ ಕೆರೆಗಳಲ್ಲಿ ಹೂಳೆತ್ತಲು ಐವತ್ತು ಕೋಟಿ ರೂ. ಖರ್ಚು ಮಾಡಲು ಸರ್ಕಾರದಿಂದ ಆಗುತ್ತಿಲ್ಲ. ಮೊನ್ನೆ ಕೋಲಾರದಲ್ಲಿ ನಡೆದ ಕೆ.ಡಿ.ಪಿ. ಸಭೆಯಲ್ಲಿ ಮಾನ್ಯ ಬೈರೇಗೌಡರು ಎಲ್ಲಾ ತಾಲ್ಲೂಕುಗಳಲ್ಲೂ ಎರಡು ಮೂರು ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮವನ್ನು ತೆಗೆದುಕೊಳ್ಳಿ, ಇದಕ್ಕಾಗಿ ಎಲ್ಲಾ ಶಾಸಕರು ರೈತರನ್ನು ಒಪ್ಪಿಸಬೇಕೆಂದು ಹೇಳಿಬಿಟ್ಟರು. ನಾವು ಹಳ್ಳಿಗಳಿಗೆ ಹೋಗಿ ರೈತರನ್ನು ಒಪ್ಪಿಸಿ ಅವರು ತಯಾರಾಗಿದ್ದಾರೆ, ಆದರೆ ಒಂದು ವಾರಾವಾದರೂ ಹೂಳೆತ್ತುವ ಎಕ್ಸಕವೇಟರ್ಸ್‌ಗಳು ಜೆ.ಸಿ.ಬಿ.ಗಳು ಬಂದಿಲ್ಲ. ಸರ್ಕಾರ ಹೂಳೆತ್ತುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಕೋಲಾರ ಜಿಲ್ಲೆಯಲ್ಲಿ ಅಂತರ್ಜಲ ಸಂಪೂರ್ಣವಾಗಿ ಇಂಗಿಹೋಗಿದೆ. ತುಮಕೂರು, ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕೆರೆಗಳ ಹೂಳೆತ್ತುವುದು ಮೂಲಭೂತವಾದ ಕಾರ್ಯಕ್ರಮವಾಗಬೇಕಾಗಿದೆ. ಇವತ್ತಿಗೂ ಅಲ್ಲಿ ಎಕ್ಸ್‌ಕವೇಟರ್ಸ್‌ಗಳನ್ನು ತರಿಸಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಆ ರೀತಿ ಸಾಧ್ಯವಾಗದಿದ್ದ ಮೇಲೆ ಹೂಳೆತ್ತುವ ಕಾರ್ಯಕ್ರಮವನ್ನು ಏಕೆ ಮಾಡುತ್ತೇವೆಂದು ಊರಿಗೆಲ್ಲಾ ಡಂಗೂರ ಸಾರಿ ಹೇಳಬೇಕು. ಸರ್ಕಾರದವರು ಕಡಿಮೆ ಕೆಪ್ಯಾಸಿಟಿ ಜೆ.ಸಿ.ಬಿ.ಗೆ ಗಂಟೆಗೆ 470

ರೂಪಾಯಿ ನಿಗದಿ ಮಾಡಿದ್ದಾರಂತೆ, ಹೆಚ್ಚು ಕಿಪ್ಯಾಸಿಟಿಯದಕ್ಕೆ 700-800 ನಿಗದಿ ಮಾಡಿದ್ದಾರಂತೆ. ಈ ಬೆಲೆಗೆ ಯಾರೂ ಬರಲು ತಯಾರಾಗಿಲ್ಲ. ನಾನೇ ಒಬ್ಬರು ಎಕ್ಸ್‌ಕವೇಟರ್ಸ್‌ರ ಹತ್ತಿರ ಫೋನ್ ಮಾಡಿ ಕೇಳಿದಾಗ ಸರ್ಕಾರದ ಬೆಲೆ ಬಹಳ ಕಡಿಮೆ ಇದೆ ಬರಲು ಆಗುವುದಿಲ್ಲವೆಂದು ಹೇಳಿದರು. ಸಣ್ಣ ನೀರಾವರಿ ಇಲಾಖೆಯ ಮುಖ್ಯ ಇಂಜಿನಿಯರ್‌ರವರು 470 ರೂಪಾಯಿಗೆ ನೋಟಿಫಿಕೇಷನ್ ಮಾಡಿದ್ದಾರೆ. ಅಷ್ಟಕ್ಕೇ ಬರಬೇಕೆಂದು ಹೇಳುತ್ತಾರಂತೆ. ಸರ್ಕಾರ ಯಾವ ಬೆಲೆಗೆ ಬೇಕಾದರೂ ಕೊಟ್ಟು ಕೊಳ್ಳಲಿ, ಕೋಲಾರ, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕೆರೆಗಳ ಹೂಳನ್ನು ಎತ್ತುವ ಕಾರ್ಯಕ್ರಮವನ್ನು ಮಾಡುತ್ತೇವೆಂದು ಹೇಳಿದ್ದಂಥ ಸರ್ಕಾರ ಇವತ್ತಿಗೂ ಅದನ್ನು ಜಾರಿಗೆ ತರಲಿಲ್ಲ. ಇವತ್ತು ಸಾವಿರಾರು ಕೋಟಿ ರೂಪಾಯಿಗಳನ್ನು ಅಲಮಟ್ಟಿಗಾಗಿ ಖರ್ಚು ಮಾಡುತ್ತಿದ್ದೀರಿ, ಆದರೆ ಈ ಮೂರು ಜಿಲ್ಲೆಗಳಿಗೆ ಹಣವನ್ನು ಕೊಡಲು ತಾವು ಸಿದ್ದರಿಲ್ಲ, ಆ ಜಿಲ್ಲೆಗಳಲ್ಲಿನ ಕೆರೆಗಳ ಹೂಳನ್ನು ಎತ್ತಲು ಹಣವನ್ನು ಸರ್ಕಾರದವರು ಕೊಡುತ್ತಾರೋ ಇಲ್ಲವೋ? ಸರ್ಕಾರದ ಬೆಲೆಗೆ ಅವರುಗಳ್ಯಾರು ಹೂಳನ್ನೆತ್ತಲು ಬರಲು ತಯಾರಾಗಿಲ್ಲ, ಮಳೆಗಾರ ಪ್ರಾರಂಭವಾಗಿಬಿಟ್ಟರೆ ಮತ್ತೆ ಒಂದು ವರ್ಷ ಆ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸರ್ಕಾರ ಏನು ಮಾಡುತ್ತದೆ ಎಂಬ ಬಗ್ಗೆ ನಿರ್ದಿಷ್ಟವಾಗಿ ಹೇಳಬೇಕೆಂದು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬಹಳ ಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಭಾರಿ ನೀರಾವರಿಗೆ ನಾವು ಬಹಳ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದೇವೆ. ಸಣ್ಣ ನೀರಾವರಿಗೆ ಅಷ್ಟು ದೊಡ್ಡ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡುವುದಿಲ್ಲದಿದ್ದರೂ ಎಷ್ಟು ಅವಶ್ಯಕತೆ ಇದೆ ಅಷ್ಟನ್ನಾದರೂ ಖರ್ಚು ಮಾಡಬೇಕಾಗುತ್ತದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಸಣ್ಣ ನೀರಾವರಿಗೆ ಈ ವರ್ಷ ಹೆಚ್ಚು ಹಣವನ್ನು ನಿಗದಿಮಾಡಿದ್ದೇವೆ. ಇಡೀ ದೇಶದಲ್ಲೇ ಕೆರೆಗಳ ಹೂಳನ್ನು ಎತ್ತುವ ಕಾರ್ಯಕ್ರಮವನ್ನು ನಮ್ಮ ರಾಜ್ಯದಲ್ಲಿ ಪ್ರಪ್ರಥಮವಾಗಿ ಕೈಗೊಂಡಿದ್ದೇವೆ. ಈ ಕೆಲಸ ಮಾಡಲು ಸರ್ಕಾರಕ್ಕೆ 20-25 ಪರ್‌ಸೆಂಟ್‌ನಷ್ಟು ಮಾತ್ರ ಖರ್ಚು ಬೀಳುತ್ತದೆ. ಉಳಿದ 70 ಪರ್‌ಸೆಂಟ್ ಖರ್ಚನ್ನು, ಮಣ್ಣಿನ ಸಾಗಾಣಿಕೆ ಖರ್ಚನ್ನು ರೈತರೇ ನೋಡಿಕೊಳ್ಳುವರು. ಆದ್ದರಿಂದ ಸರ್ಕಾರಕ್ಕೆ ಅಷ್ಟಾಗಿ ಖರ್ಚು ಬರುವುದಿಲ್ಲ. ಇಂಥ ಉತ್ತಮವಾದ ಕಾರ್ಯಕ್ರಮವನ್ನು ನಾವು ಹಾಕಿದ್ದೇವೆ. ಮಣ್ಣನ್ನು ತುಂಬುವ ಯಂತ್ರಕ್ಕೆ ಗಂಟೆಗೆ ಇಂತಿಷ್ಟು ಬೆಲೆಯೆಂದು ಕೊಟೇಷನ್ ಕರೆದಿದ್ದಾರೆ. ಸಣ್ಣ ಪ್ರಮಾಣದ ಯಂತ್ರಕ್ಕೆ 475 ರೂ. ದೊಡ್ಡ ಪ್ರಮಾಣದಕ್ಕೆ 850 ಇಲ್ಲವೆ 900 ರೂಪಾಯಿಗಳೆಂದು ನಿಗದಿ ಮಾಡಿದ್ದಾರೆ. ಮಾನ್ಯ ಶ್ರೀರಾಮ -ರೆಡ್ಡಿಯವರು ಹೇಳಿದಂತೆ, ಮೊನ್ನೆ ಕೋಲಾರದಲ್ಲಿ ನಡೆದ ಪರಿಶೀಲನಾ ಸಭೆಯಲ್ಲಿ ಪ್ರತಿ ತಾಲ್ಲೂಕಿನಲ್ಲೂ ಕನಿಷ್ಟ ಎರಡು ಮೂರು ಕೆರೆಗಳ ಹೂಳೆತ್ತುವ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೆ. ಹೂಳೆತ್ತುವ ಯಂತ್ರಗಳನ್ನು ಹುಡುಕುತ್ತಿದ್ದೇವೆ, ಒಬ್ಬಿಬ್ಬರು ಮುಂದೆ ಬಂದಿದ್ದಾರೆ, ಸಾಕಷ್ಟು ಜನರು ಸಹಕರಿಸುತ್ತಿಲ್ಲ. ನನ್ನ ಕಛೇರಿಯಲ್ಲಿ ನಾಲ್ಕು ದಿವಸಗಳ ಹಿಂದೆ ಒಂದು ಸಭೆಯನ್ನು ಮಾಡಿ ಬಿ.ಇ.ಎಂ.ಎಲ್. ರವರ ಮೂಲಕವಾದರೂ ಯಂತ್ರಗಳನ್ನು ಪಡೆದು ಇಡೀ ರಾಜ್ಯದಲ್ಲಿ ಕನಿಷ್ಟ ನೂರು ಕಡೆ ಹೂಳು ಎತ್ತುವ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಪ್ರಯತ್ನ ಪಟ್ಟಿರುತ್ತೇನೆ. ನಾವು

ನಿಗದಿ ಮಾಡಿರುವ ಬೆಲೆಗೆ ಬಿ.ಇ.ಎಂ.ಎಲ್. ನವರೂ ಬರಲು ತಯಾರಿಲ್ಲ. ಇದರ ಬಗ್ಗೆ ಸಣ್ಣ ನೀರಾವರಿ ಸಚಿವರ ಜೊತೆ ಚರ್ಚೆ ಮಾಡಿದ್ದೇನೆ. ಈಗ ನಿಗದಿ ಮಾಡಿರುವ ದರ ಸರಿಯಾಗಿಲ್ಲ, ಇದರಲ್ಲೂ ಸ್ವಲ್ಪ ಮಾರ್ಪಾಡು ಮಾಡಬೇಕೆಂದು ಅವರಲ್ಲಿ ವಿನಂತಿ ಮಾಡಿಕೊಂಡಿದ್ದೇವೆ. ಮತ್ತೊಮ್ಮೆ ಸಣ್ಣ ನೀರಾವರಿ ಸಚಿವರನ್ನು ಮತ್ತು ಇಲಾಖೆಯವರನ್ನು ಸಂಪರ್ಕ ಮಾಡಿ ಈ ಸಮಸ್ಯೆಯನ್ನು ಬಗೆಹರಿಸತಕ್ಕ ಕೆಲಸವನ್ನು ಮಾಡುತ್ತೇನೆ. ಮಳೆ ಬರುವುದರೊಳಗಾಗಿ ಈ ಕೆಲಸ ಮಾಡಬೇಕಾಗಿದೆ. ಬಾಡಿಗೆ ದರವೇನು ನಿಗದಿ ಮಾಡಿದ್ದೀರಿ ಅದು ಸ್ವಲ್ಪ ಹೆಚ್ಚು ಕಡಿಮೆಯಾದರೂ ಚಿಂತೆ ಇಲ್ಲ ಕೆಲಸ ಮಾಡಬೇಕು ಎಂಬ ಅಭಿಪ್ರಾಯ ಸರ್ಕಾರಕ್ಕಿದೆ. ಇದರ ಬಗ್ಗೆ ಸಣ್ಣ ನೀರಾವರಿ ಸಚಿವರ ಸಂಪರ್ಕ ಬೆಳೆಸಿ ಅವರ ಮನವೊಲಿಸಿ ಆದಷ್ಟು ಬೇಗ ಯಂತ್ರಗಳನ್ನು ಒದಗಿಸುವಲ್ಲಿ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ನಂಜಾಮರಿ (ತಿಪಟೂರು) : ಮಾನ್ಯ ಅಧ್ಯಕ್ಷರೆ, ನಮ್ಮ ತಿಪಟೂರಿನಲ್ಲಿ ತೆಂಗಿನ ಮರಕ್ಕೆ ಮಳೆ ಇಲ್ಲದೆ ಬಹಳ ತೊಂದರೆಯಾಗಿದೆ. ಈ ಮಣ್ಣನ್ನು ನೋಡಿದರೆ ಒಂದು ಹದ ಮಳೆಯಾದರೂ ಮರ ಚೆನ್ನಾಗಿರುತ್ತದೆ. ನಮ್ಮ ತಾಲ್ಲೂಕಿನಲ್ಲಿ ಮೂರು ಕೆರೆಗಳಲ್ಲಿ ಹೂಳನ್ನು ಎತ್ತುತ್ತಿದ್ದಾರೆ. ಜೆ.ಸಿ.ಬಿ.ಗಳು ನಮ್ಮಲ್ಲಿ ಬಂದು ಕೆಲಸ ಮಾಡುತ್ತಿವೆ, ಸಾಕಷ್ಟು ಹಣ ಕೊಟ್ಟರೂ ನಮ್ಮಲ್ಲಿನ ಕೆರೆಗಳ ಹೂಳನ್ನು ಇನ್ನೂ ಎತ್ತಬಹುದು. ಒಂದು ಜೆ.ಸಿ.ಬಿಗೆ ಐವತ್ತು ಟ್ರಾ್ಯಕ್ಟರ್ ನಿಂತಿರುತ್ತದೆ, ಒಂದು ಟ್ರಾ್ಯಕ್ಟರ್‌ಗೆ ಒಂದು ಗಂಟೆಗೆ ಒಂದು ಲೋಡ್ ಮಣ್ಣು ಸಿಗುತ್ತದೆ. ಬಯಲುಸೀಮೆ ಅಭಿವೃದ್ಧಿಯಲ್ಲಿ ಬಂದಿರುವ ಹಣವನ್ನು ಎರಡು ಕೆರೆಗಳ ಹೂಳನ್ನು ಎತ್ತಲು ಕೊಟ್ಟಿದ್ದಾರೆ. ಆ ಹಣ ಸಾಕಾಗುತ್ತಿಲ್ಲ. ಇನ್ನು ಹೆಚ್ಚು ಹಣವನ್ನು ಕೊಟ್ಟರೆ ನಾವು ಸುಮಾರು ಕೆರೆಗಳ ಹೂಳನ್ನು ಎತ್ತಿಸುತ್ತೇವೆ. ಆದ್ದರಿಂದ ಇದಕ್ಕೆ ಇನ್ನು ಜಾಸ್ತಿ ಹಣವನ್ನು ಕೊಡಬೇಕೆಂದು ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ಈ ಕಾರ್ಯಕ್ರಮದ ಬಗ್ಗೆ ಪತ್ರಿಕೆಗಳಲ್ಲಿ ಸಾಕಷ್ಟು ಪ್ರಚಾರವಾಗಿದೆ. ಬೈರೇಗೌಡರ ಹೆಸರು ಹಳ್ಳಿಯ ಸುತ್ತಮುತ್ತಲು ಏನೋ ಕೆಲಸ ಮಾಡಲು ಹೊರಟಿದ್ದಾರೆಂದು ತಮ್ಮ ಕಡೆ ರೈತ ನೋಡುತ್ತಿದ್ದಾನೆ. ನಾವು ಯಾವುದೇ ಹಳ್ಳಿಗೆ ಹೋದರೂ ಬೈರೇಗೌಡರು ಹೇಳಿದ್ದಾರೆ ತಾಲ್ಲೂಕಿನಲ್ಲಿ ಎರಡು ಮೂರು ಕೆರೆಯ ಹೂಳನ್ನು ಎತ್ತಿಸುತ್ತಾರಂತೆ, ನಾವು ಮಣ್ಣನ್ನು ತೆಗೆದುಕೊಳ್ಳಲು ಟ್ರಾ್ಯಕ್ಟರ್‌ಗಳನ್ನು ತೆಗೆದುಕೊಂಡು ಹೋಗಬಹುದೆ ಎಂದು ಶಾಸಕರಾದ ನಮ್ಮನ್ನು ರೈತರು ಕೇಳುತ್ತಿದ್ದಾರೆ. ಇದು ಸಮಸ್ಯೆಯಾಗಿದೆ. ಈ ಕಾರ್ಯಕ್ರಮವನ್ನು ಘೋಷಣೆ ಮಾಡುವುದಕ್ಕೂ ಮೊದಲು ಒಂದು ವ್ಯವಸ್ಥೆ ಇರಬೇಕಲ್ಲವೆ? ಹಾಗಿದ್ದರೆ ಈ ಕಾರ್ಯಕ್ರಮಕ್ಕೆ ಎಷ್ಟು ಹಣ ಇಟ್ಟಿದ್ದೀರಿ? ಎಕ್ಸಕವೇಟರ್ಸ್ ಎಷ್ಟು ಹಣ ಕೊಡಬೇಕು, ತಾವು ಕೊಡುವ ಹಣದಿಂದ ಅದು ಸಾಧ್ಯವಾಗುತ್ತದೆಯೇ? ಬೇಕಾದರೆ ಅದನ್ನೇ ಕೊಂಡುಕೊಳ್ಳಿ ಏಕೆಂದರೆ ಈ ಕಾರ್ಯಕ್ರಮ ಇಂದು ಮಾಡಿ ನಾಳೆ ನಿಲ್ಲಿಸುವುದಲ್ಲ, ಇದು ಮುಂದುವರೆಯುತ್ತಿರುತ್ತದೆ. ಅಥವಾ ತಾವು ಎಕ್ಸ್‌ಕವೇಟರ್ಸ್‌ಗೆ ಸರಿಯಾದ ಬೇಡಿಕೆಯನ್ನು ಸಲ್ಲಿಸಿ ಒಂದೇ ಸಮಯದಲ್ಲಿ ದೊಡ್ಡ ದೊಡ್ಡ ಕೆರೆಗಳ ಹೂಳೆತ್ತುವ ಕೆಲಸ ಪ್ರಾರಂಭವಾಗಬೇಕಲ್ಲವೆ? ಎಲ್ಲೋ ಒಂದೆರಡು ಕಡೆ ಆ ಕೆಲಸ ಮಾಡಿ ಪತ್ರಿಕೆಗಳಲ್ಲಿ ಫೋಟೋ ಹಾಕಿಸಿಕೊಂಡು ಬೈರೇಗೌಡರು ಟ್ರಾ್ಯಕ್ಟರ್ ಎಕ್ಸ್‌ಕವೇಟರ್ಸ್‌ನ ಮುಂದೆ ನಿಂತಿರುವುದನ್ನು ನೋಡಿ

ಆನಂದ ಪಡುವುದರಿಂದ ತಮಗೆ ತೃಪ್ತಿ ಬರುವುದಾದರೆ ನಾನು ಏನೂ ಹೇಳುವುದಕ್ಕಾಗುವುದಿಲ್ಲ. ತಾವು ಎಕ್ಸ್‌ಕವೇಟರ್‌ಸನ್ನು ಹೇಗೆ ತರುತ್ತೀರೋ? ಎಷ್ಟು ಹಣ ಕೊಡುತ್ತೀರೋ ನಮಗೆ ಗೊತ್ತಿಲ್ಲ? ರೈತರು ಟ್ರಾಕ್ಟರನ್ನು ತಂದು ಮಣ್ಣನ್ನು ತೆಗೆದುಕೊಂಡು ಹೋಗಲು ತಯಾರಾಗಿದ್ದಾರೆ. ನೀವು ಆ ವ್ಯವಸ್ಥೆ ಮಾಡಲು ತಯಾರಾಗಿದ್ದೀರಾ? ಇದಕ್ಕಾಗಿ ಎಷ್ಟು ಹಣವನ್ನು ತೆಗೆದು ಇಟ್ಟಿದ್ದೀರಿ? ನಿಮ್ಮ ಕಾರ್ಯಕ್ರಮವೇನು? ಇದುವರೆಗೆ ಏನು ಪ್ರಗತಿಯಾಗಿದೆ ತಮಗೆ ಬೇಕಾದಂತೆ ಕೋಲಾರ ಜಿಲ್ಲೆಯಲ್ಲಿ ಎರಡು ಮೂರು ಕೆರೆ ಹೂಳೆತ್ತಿದರೆ ಬೇರೆ ಜಿಲ್ಲೆಯವರಿಗೆ ಸಮಾಧಾನವಾಗುತ್ತದೆಯೇ? ದಯಮಾಡಿ ಇಲ್ಲಿ ತಮ್ಮ ಸ್ಪಷ್ಟವಾದ ಕಾರ್ಯಕ್ರಮವೇನು ಎಂಬ ಬಗ್ಗೆ ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಸರ್ಕಾರವೇನು ಸಧ್ಯ ಎಕ್ಸ್‌ಕವೇಟರ್ಸ್‌ಗೆ ಬೆಲೆಯನ್ನು ಕೊಡುತ್ತೇವೆಂದು ಹೇಳಿದ್ದಾರೆ ಆ ಬೆಲೆಗೆ ಅವರು ಬರಲು ಸಿದ್ದರಾಗಿಲ್ಲ. ಸಣ್ಣ ಕೆಪ್ಯಾಸಿಟಿಯದಕ್ಕೆ 470 ರೂ. ಹೆಚ್ಚಿನ ಕೆಪ್ಯಾಸಿಟಿಯದಕ್ಕೆ 800 ರೂ. ಕೊಡುತ್ತಾರಂತೆ. ಈ ಬೆಲೆಗೆ ಖಂಡಿತಾ ಯಾರೂ ಬರುವುದಿಲ್ಲ. ಇದರಲ್ಲಿ ನಿಯಮಾವಳಿಗಳಿದೆಯೆಂದು ಮುಖ್ಯ ಇಂಜಿನಿಯರ್‌ರವರು ಕೊಕ್ಕೆ ಹಾಕಿಬಿಟ್ಟಿದ್ದಾರೆ. ಇಲ್ಲಿ ನಿಯಮಾವಳಿಗಳನ್ನು ಬದಲಾವಣೆ ಮಾಡಬೇಕು ಇಲ್ಲವೇ ಸರ್ಕಾರ ದೃಢವಾದಂಥ ನಿರ್ಧಾರ ತೆಗೆದುಕೊಳ್ಳಬೇಕು. ಮುಖ್ಯ ಅಭಿಯಂತರು ಹೇಳಿದಂತೆ ಸರ್ಕಾರ ನಡೆಯುವುದಕ್ಕಾಗುವುದಿಲ್ಲ, ಕೆರೆಗಳ ಹೂಳೆತ್ತಿಸಬೇಕು. ಆ ಮೂಲಕ ಅಂತರ್ಜಲವನ್ನು ಹೆಚ್ಚು ಮಾಡುವ ಬಗ್ಗೆ ಸರ್ಕಾರಕ್ಕೆ ಪ್ರಾಮಾಣಿಕವಾದ ಕಳಕಳಿ ಇದ್ದರೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕೇ ಹೊರತು ಯಾರೋ ಅಧಿಕಾರಿ ಹೇಳಿದನ್ನು ಕೇಳಿಕೊಂಡು ಕುಳಿತುಕೊಳ್ಳಲು ಸಾಧ್ಯವಿಲ್ಲ. ಆ ಕೆಲಸ ನಿಂತು ಹೋಗುತ್ತದೆ. ಮೊದಲು ಆ ಬೆಲೆಯನ್ನು ಹೆಚ್ಚು ಮಾಡಬೇಕು, ಇಲ್ಲದಿದ್ದರೆ ಅವರು ಬರುವುದಿಲ್ಲ, ಬೆಲೆ ಹೆಚ್ಚು ಮಾಡಿದರೆ ಒಂದು ಗಂಟೆಯಲ್ಲಿ ಅವರುಗಳು ಬರಲು ತಯಾರಾಗಿದ್ದಾರೆ. ಕೆರೆಗಳಲ್ಲಿ ಹೂಳೆತ್ತಿಸಬೇಕು ಮತ್ತು ಅಂತರ್ಜಲವನ್ನು ಹೆಚ್ಚಿಸಬೇಕು ಎಂಬುದು ನಿಜವಾದ ಉದ್ದೇಶ ನಿಮ್ಮದಿದ್ದರೆ ಅದಕ್ಕೆ ಸರ್ಕಾರ ಒಂದು ನಿರ್ದಿಷ್ಟ ತೀರ್ಮಾನ ತೆಗೆದುಕೊಳ್ಳಬೇಕೇ ವಿನಃ ಯಾರೋ ಒಬ್ಬ ಅಧಿಕಾರಿ ಹೇಳಿದ ಹಾಗೆ ಕೇಳಿಕೊಂಡು ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಬೇಗ ತೀರ್ಮಾನ ತೆಗೆದುಕೊಳ್ಳದಿದ್ದರೆ ಮಳೆ ಬಂದ ಮೇಲೆ ಆ ಕೆಲಸವನ್ನೂ ಮಾಡುವುದಕ್ಕಾಗದೇ ಹಾಗೆಯೇ ನಿಂತುಹೋಗುತ್ತದೆ. ಆದುದರಿಂದ ಮೊದಲು ಆ ರೇಟನ್ನು ಹೆಚ್ಚು ಮಾಡಿದರೆ ಮಾತ್ರ ಅವರು ಬರುತ್ತಾರೆಯೇ ವಿನಹ ಇಲ್ಲದಿದ್ದರೆ ಅವರು ಬರುವುದಿಲ್ಲ. ಈಗಲೇ ರೇಟ್ ಜಾಸ್ತಿ ಮಾಡಿದರೆ ಇನ್ನೊಂದು ಗಂಟೆಯಲ್ಲಿ ಅವರು ಬಂದು ಕೆಲಸ ಮಾಡುವುದಕ್ಕೆ ತಯಾರಿದ್ದಾರೆ. ಆದುದರಿಂದ ಅದರ ಬಗ್ಗೆ ಏನು ಮಾಡುತ್ತೀರಿ ಎಂಬ ಬಗ್ಗೆ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀರಾಮ ರೆಡ್ಡಿಯವರು ಹೇಳಿದುದರಲ್ಲಿ ಅರ್ಥ ಇದೆ. ಈ ಎಕ್ಸ್‌ಕವೇಟರ್‌ಗೆ ಸಂಬಂಧಪಟ್ಟಂತೆ ಎಸ್. ಆರ್. ರೇಟ್ ಇರುತ್ತದೆ, ಆ ಎಸ್.ಆರ್. ರೇಟ್ ಏನಿರುತ್ತದೆಯೋ ಅದಕ್ಕೆ ಮಾತ್ರ ಚೀಫ್ ಇಂಜಿನಿಯರ್ ಅಪ್ರೂವಲ್ ಕೊಡುತ್ತಾನೆಯೇ ವಿನಹ ಎಸ್.ಆರ್. ರೇಟ್ ಇರದಿದ್ದರೆ ಅವನು ಅಪ್ರೂವಲ್ ಕೊಡುವುದಿಲ್ಲ.

ಆದುದರಿಂದ ಸರ್ಕಾರದ ಲೆವೆಲ್‌ನಲ್ಲಿ ಪಿಡಬ್ಲ್ಯೂಡಿಯಲ್ಲಿ ವರ್ಕ್‌ಔಟ್ ಮಾಡಿ ನೀವು ಸ್ಯಾಂಕ್ಷನ್ ಮಾಡಿ ಕೊಟ್ಟರೆ ಅವರು ಕೆಲಸವನ್ನು ಮಾಡುತ್ತಾರೆ. ಈಗ ನಮ್ಮ ತಿಪಟೂರು ಸದಸ್ಯರು ಹೇಳಿದ ಹಾಗೆ ನೀವು ಬರೀ ಬುಡಬುಡಕಿ ರೀತಿಯಲ್ಲಿ ಮಾತನಾಡುತ್ತೀರಷ್ಟೆ. ಇವೊತ್ತಿನ ದಿವಸ ಯಾವ ಎಕ್ಸಿಕ್ಯೂಟಿವ್ ಇಂಜಿನಿಯರ್ ಕೈಯಲ್ಲಿ ಡೀಸಲ್ ಕೊಳ್ಳಲೂ ಕೂಡ ದುಡ್ಡಿಲ್ಲ. ಮೊನ್ನೆ ನಮ್ಮ ತಾಲ್ಲೂಕಿನಲ್ಲಿ ಕೆಲಸವಾಗಬೇಕಾದರೆ ಬೇಕಾದ ಡೀಸಲನ್ನು ನಾನು ಕೊಡಿಸಿ ಬಂದಿದ್ದೇನೆ. ಅಂದರೆ ಸರ್ಕಾರದವರು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಡೀಸಲ್ ಕೊಳ್ಳಲು ದುಡ್ಡನ್ನು ಕೊಟ್ಟಿಲ್ಲ. ಹೀಗಿರುವ ಸಂದರ್ಭದಲ್ಲಿ ಕೆರೆ ಹೂಳನ್ನು ತೆಗೆಸುತ್ತಾರೆಯೇ? ಯಾವ ಯಾವ ಇಂಜಿನ್‌ಗೆ ಎಷ್ಟೆಷ್ಟು ಡೀಸಲ್‌ಗಾಗಿ ದುಡ್ಡು ಕೊಟ್ಟಿದ್ದಾರೆ ಅದರ ಬಗ್ಗೆ ವಿವರ ಕೊಡಲಿ ನೋಡೋಣ.

ಅಧ್ಯಕ್ಷರು : ಈಗ ತಾವು ಎಲಾಬರೇಟ್ ಆಗಿ ರಿಪ್ಲೈಯನ್ನು ಕೊಟ್ಟಿದ್ದೀರಿ. ಇನ್ ಪ್ರಿನ್ಸಿಪಲ್ ಮೈನರ್ ಇರಿಗೇಷನ್‌ಗೆ ಹೆಚ್ಚಿಗೆ ಹಣ ಕೊಡಬೇಕು ಎಂಬ ಬಗ್ಗೆ ಹೇಳಿದ್ದೀರಲ್ಲದೆ ಈಗಲೂ ಕೂಡ ಅದು ಒಂದು ಮುಖ್ಯವಾದ ಭಾಗವಾಗಿರುತ್ತದೆ ಎಂದು ಹೇಳಿದ್ದಾರೆ. ಆದುದರಿಂದ ರಿಪ್ಲೈ ಮೇಲೆ ಮತ್ತೆ ಚರ್ಚೆ ಮಾಡುವುದು ಬೇಡ, ಶೂನ್ಯ ವೇಳೆಯೇ ಹೀಗೆ ಮುಂದುವರಿದರೆ ನನಗೆ ಕಷ್ಟವಾಗುತ್ತದೆ. ಈಗ ಮಧುಸ್ವಾಮಿಯವರು ಮಾತನಾಡಲಿ.

ತುಮಕೂರು ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜು ಕಳಪೆ ಮಟ್ಟದ್ದಾಗಿರುವುದರ ಬಗ್ಗೆ ಪ್ರಸ್ತಾಪ

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಅಸಮರ್ಪಕವಾಗಿ ಸರಬರಾಜಾಗುತ್ತಿದೆಯಾದ್ದರಿಂದ ರೈತರುಗಳಿಗೆ ಬಹಳ ತೊಂದರೆಯಾಗುತ್ತಿದೆ ಎಂಬ ಬಗ್ಗೆ ನಾವುಗಳು ಅನೇಕ ಬಾರಿ ಇಲ್ಲಿ ಪ್ರಸ್ತಾಪ ಮಾಡಿದರೂ ಕೂಡ ಯಾವುದೇ ಕಾರ್ಯಕ್ರಮವನ್ನು ಕೆ.ಇ.ಬಿ. ಯಾವರಾಗಲೀ ಅಥವಾ ಸರ್ಕಾರದವರಾಗಲಿ ತೆಗೆದುಕೊಳ್ಳಲಿಲ್ಲ. ಇದರ ಜೊತೆಗೆ ಭೀಕರ ಬಿರುಗಾಳಿಯಿಂದಾಗಿ ಚಿಕ್ಕನಾಯಕನಹಳ್ಳಿ ಮತ್ತು ಅರಸೀಕೆರೆಗಳಲ್ಲಿ ಕಿ.ಮೀ ಗಟ್ಟಲೆ ಕಂಬಗಳು ಮತ್ತು ವಿದ್ಯುತ್ ತಂತಿಗಳು ಕಟ್ ಆಗಿ ಕೆಳಗಡೆ ಬಿದ್ದಿರುವುದರಿಂದ ವಿದ್ಯುಚ್ಛಕ್ತಿ ಸರಬರಾಜನ್ನು ರೆಗ್ಯುಲರ್ ರೀತಿಯಲ್ಲಿ ಮಾಡುವುದಕ್ಕಾಗುತ್ತಿಲ್ಲ. ಇದನ್ನು ಸರಿಪಡಿಸಲು ಸರಿಯಾದ ರೀತಿಯಲ್ಲಿ ಮೆಟೀರಿಯಲ್‌ಗಳೂ ಕೂಡ ಇಲ್ಲಿಂದ ಸರಿಯಾಗಿ ಹೋಗುತ್ತಿಲ್ಲ. ಸುಮಾರು 15 ದಿವಸಗಳಿಂದ ನಮ್ಮ ಭಾಗದಲ್ಲಿ ವಿದ್ಯುತ್ ಸರಬರಾಜು ಸಮರ್ಪಕವಾಗಿ ಆಗುತ್ತಲೇ ಇಲ್ಲ. ಕೆ.ಇ.ಬಿ.ಯವರಿಗೆ ಅಲ್ಲಿಯ ಎಮರ್ಜೆನ್ಸಿಯನ್ನಾದರೂ ಟ್ಯಾಕಲ್ ಮಾಡಬೇಕು ಎನ್ನುವ ಸೌಜನ್ಯ ಕೂಡ ಇಲ್ಲ. ಇವೆಲ್ಲದರ ಜೊತೆಗೆ ಟ್ರಾನ್ಸ್‌ಫಾರ್ಮರ್‌ಗಳು ಬಂದಿಲ್ಲವೆಂದು ಹೇಳಿ ತುಮಕೂರು ಜಿಲ್ಲೆಯ ಉಸ್ತುವಾರಿ ಸಚಿವರು ಶಿರಾದಲ್ಲಿ ಎರಡು ಗಂಟೆಗಳ ಕಾಲ ಧರಣಿಯನ್ನು ಮಾಡಿದ್ದಾರೆ. ಇದರ ಬಗ್ಗೆ ನಾವೇನು ಹೇಳಬೇಕೋ ಅರ್ಥವಾಗುತ್ತಿಲ್ಲ. ಸನ್ಮಾನ್ಯ ಉಸ್ತುವಾರಿ ಸಚಿವರೇ ಎರಡು ಗಂಟೆಗಳ ಕಾಲ ಧರಣಿ ಮಾಡಿ ಕೆ.ಇ.ಬಿ ಪ್ರಿಮಿಸಸ್‌ನಲ್ಲಿ ವರ್ಕಿಂಗ್‌ನಲ್ಲಿದ್ದ ಟ್ರಾನ್ಸ್‌ಫಾರ್ಮರನ್ನು ತೆಗೆಸಿ ಯಾವುದೋ ಬೇರೆ ಹಳ್ಳಿಗೆ ಹಾಕಿಸಿದ್ದಾರೆ. ಈ